
بسم اللہِ الرّحمٰن الرّحیم



# ಜಲ್ಸಾ ಸಾಲಾನ ಜರ್ಮನಿ – 2024

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **23-08-2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ـ بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್‌ಹಮ್ದುಲಿಲ್ಲಾಹ್, ಇಂದು ಜಲ್ಸ ಸಾಲಾನ ಜರ್ಮನಿ ಆರಂಭವಾಗುತ್ತಿದೆ. ಈ ವೇಳೆ ಜರ್ಮನಿಯ ಜಮಾಅತ್ ನನ್ನನ್ನು ಅಲ್ಲಿನ ಜಲ್ಸದಲ್ಲಿ ನೋಡಲು ಬಯಸಿತ್ತು. ಆದರೆ ಮನುಷ್ಯನ ಜೊತೆಗೆ ಮಾನುಷಿಕ ಅಡಚಣೆಗಳು ಸೇರಿಕೊಂಡಿರುತ್ತವೆ. ಆರೋಗ್ಯ ಇತ್ಯಾದಿಗಳು ಕೂಡ ಅದರ ಭಾಗವಾಗಿದೆ. ಆದ್ದರಿಂದ ವೈದ್ಯರ ನಿರ್ದೇಶನ ಪ್ರಕಾರ ಕೊನೆಗೆ ಜರ್ಮನಿ ಯಾತ್ರೆಯನ್ನು ರದ್ದುಗೊಳಿಸ ಬೇಕಾಯಿತು. ಇಲ್ಲಿಂದಲೇ ಜರ್ಮನಿ ಜಲ್ಸದ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ಮತ್ತು ಜಲ್ಸದಲ್ಲಿ ಭಾಗವಹಿಸಿರುವವರನ್ನು ಇಲ್ಲಿಂದಲೇ ಸಂಬೋಧಿಸಲು ತೀರ್ಮಾನಿಸಲಾಯಿತು. ಇದು ಕೂಡ ಅಲ್ಲಾಹನು ನೀಡುವ ಸೌಭಾಗ್ಯದಿಂದಲೇ ಆಗುವುದು. ಅಲ್ಲಾಹನು ಅದರ ಸೌಭಾಗ್ಯ ನೀಡಲು ದುಆ ಮಾಡಿರಿ.

ಈ ಕಾಲದ ಆವಿಷ್ಕಾರಗಳಲ್ಲಿ ಅಲ್ಲಾಹನು ಸಂಪರ್ಕ ಮಾಧ್ಯಮಗಳನ್ನು ದಯಪಾಲಿಸಿರುವನು ಎಂಬುದು ಕೂಡ ಅಲ್ಲಾಹನ ಔದಾರ್ಯವಾಗಿದೆ. ಭೇಟಿಯಾಗಲು ಬಯಸುತ್ತಿದ್ದ ಅನೇಕರಿಗೆ ಅದರ ಸೌಭಾಗ್ಯವನ್ನು ಅಲ್ಲಾಹನು ಬೇರೊಂದು ಸಮಯದಲ್ಲಿ ದಯಪಾಲಿಸುವನು.

ಡ್ಯೂಟಿ ಮಾಡುವ ಎಲ್ಲ ಕಾರ್ಯಕರ್ತರೊಡನೆ ನಾನು ಹೇಳಲು ಬಯಸುತ್ತೇನೆ. ಅತಿಥಿಗಳ ಅತಿಥಿ ಸತ್ಕಾರವನ್ನು ಸಾಧ್ಯವಾದಷ್ಟು ಮಟ್ಟಿಗೆ ಸೇವಾ ಮನೋಭಾವದಿಂದ ಮಾಡಿರಿ, ಉತ್ತಮವಾಗಿ ವರ್ತಿಸಿರಿ, ಪ್ರತಿಯೊಂದು ವಿಭಾಗದ ಕಾರ್ಯಕರ್ತರು ಹಸನ್ಮುಖರಾಗಿ ಅತಿಥಿಗಳೊಡನೆ ವರ್ತಿಸಿರಿ, ದುಆಗಳನ್ನು ಮಾಡುತ್ತಾ ಕೆಲಸ ಮಾಡಿರಿ, ಹಝ್‌ರತ್ ಮಸೀಹ್ ಮೌಊದ್[ಅ] ಕರೆದ ಕಾರಣದಿಂದ ಆಗಮಿಸಿರುವ ಅತಿಥಿಗಳ ಸೇವೆ ಮಾಡಬೇಕು ಎಂಬ ಭಾವನೆಯೊಂದಿಗೆ ಕೆಲಸ ಮಾಡಿರಿ, ಏನೇ ಆದರೂ ನಾವು ನಮ್ಮ ಸ್ವಭಾವಗುಣದ ಉನ್ನತ ಮಟ್ಟವನ್ನು ಇರಿಸುತ್ತಾ ಸೇವೆ ಮಾಡುತ್ತಲೇ ಹೋಗಬೇಕು ಎಂದು ನಿರ್ಧರಿಸಿರಿ. ಅತಿಥಿಗಳು ಸಹ ಜಲ್ಸದ ಉದ್ದೇಶವನ್ನು ನೆನಪಿಡಬೇಕು ಮತ್ತು ಎಲ್ಲ ಕಷ್ಟತೆಗಳನ್ನು ಸಹಿಸುತ್ತಾ ಈ ಮೂರು ದಿನಗಳಲ್ಲಿ ಜಲ್ಸದ ಉದ್ದೇಶವನ್ನು ಮುಂದಿರಿಸಬೇಕು.

ವರ್ಷದಲ್ಲಿ ಒಂದು ಬಾರಿ ನಾವೆಲ್ಲರೂ ನಮ್ಮ ನೈತಿಕ ಮತ್ತು ಆಧ್ಯಾತ್ಮಿಕ ಅಭಿವೃದ್ಧಿಯನ್ನು ಉಂಟುಮಾಡಲು ಹಝ್‌ರತ್ ಮಸೀಹ್ ಮೌಊದ್[ಅ]ರ ಮೂಲಕ ಅಲ್ಲಾಹನು ನಮಗೆ ಸೌಭಾಗ್ಯ ನೀಡಿದ್ದಾನೆ ಎಂಬುದು ಅಲ್ಲಾಹನು ನಮಗೆ ದಯಪಾಲಿಸಿರುವ ಬಹುಮಾನಗಳಲ್ಲಿ ಬಹಳ ದೊಡ್ಡ ಬಹುಮಾನವಾಗಿದೆ ಎಂಬುದನ್ನು ಸದಾ ನೆನಪಿನಲ್ಲಿಡಿರಿ. ನಮ್ಮನ್ನು ಅಲ್ಲಾಹನ ಸಮೀಪಗೊಳಿಸುವ ಮತ್ತು ದೇವಭಕ್ತಿಯನ್ನು ವರ್ಧಿಸುವ ಕಾರ್ಯಕ್ರಮಗಳನ್ನು ಅವನು ಒದಗಿಸಿ ಕೊಟ್ಟಿರುವನು. ಉನ್ನತ ಸ್ವಭಾವಗುಣ ಮತ್ತು ಪರಸ್ಪರ ಹಕ್ಕುಗಳನ್ನು ಈಡೇರಿಸುವ ಉನ್ನತ ಮಟ್ಟವನ್ನು ಗಳಿಸುವ ಉದ್ದೇಶದಿಂದ ಈ ದಿನಗಳನ್ನು ಕಳೆಯುವಂತೆ ಮಾಡಲು ಸೌಭಾಗ್ಯ ನೀಡಿರುವನು. ಪರಸ್ಪರ ಪ್ರೀತಿಯನ್ನು ಮತ್ತು ಸಂಬಂಧವನ್ನು ವರ್ಧಿಸಬೇಕು, ಪರಸ್ಪರರ ಒಡಕುಗಳನ್ನು ದೂರಮಾಡಬೇಕು, ಅಲ್ಲಾಹನ ಸಂಪ್ರೀತಿಯನ್ನು ಗಳಿಸಲು ಪ್ರಯತ್ನಿಸಬೇಕು, ಎಲ್ಲ ವಿಧದ ವ್ಯರ್ಥವಾದ ಕಾರ್ಯಗಳಿಂದ ಸ್ವತಃ ದೂರವಿರಬೇಕು. ಇವುಗಳನ್ನೇ ಹಝ್‌ರತ್ ಮಸೀಹ್ ಮೌಊದ್[ಅ] ನಮ್ಮಿಂದ ಪ್ರತೀಕ್ಷಿಸಿದ್ದರು. ಇವುಗಳೇ ಅಲ್ಲಾಹನಿಗೆ ಇಷ್ಟಕರವಾದ ಸಂಗತಿಗಳಾಗಿವೆ. ಆದ್ದರಿಂದಲೇ ಅವನು ನಮ್ಮನ್ನು ಮನುಷ್ಯರನ್ನಾಗಿ ಮತ್ತು ಸೃಷ್ಟಿಗಳಲ್ಲಿ ಅತ್ಯುತ್ತಮರನ್ನಾಗಿ ಮಾಡಿರುವನು. ಜಲ್ಸದಲ್ಲಿ ಆಗಮಿಸುವ ಪ್ರತಿಯೊಬ್ಬ ಅಹ್ಮದಿ ಇವುಗಳನ್ನು ಗಮನದಲ್ಲಿಡಬೇಕು.

ಅಲ್ಲಾಹನ ಪ್ರೀತಿಯಲ್ಲಿ ವರ್ಧಿಸಲು, ಉನ್ನತ ಸ್ವಭಾವಗುಣವನ್ನು ತೋರಿಸಲು, ದಾಸರ ಹಕ್ಕುಗಳನ್ನು ಈಡೇರಿಸಲು ಮತ್ತು ದೇವಭಕ್ತಿಯನ್ನು ಗಳಿಸಲು ಪ್ರಯತ್ನ ನಡೆಯುತ್ತಿಲ್ಲವೆಂದಾದರೆ ಜಲ್ಸದಲ್ಲಿ ಬರುವ ಉದ್ದೇಶ ಪೂರ್ತಿಯಾಗದು. ಹಝ್‌ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಈಗಿನ ಪೀರ್‌ಗಳ ಮತ್ತು ಪಂಡಿತರ ಹಾಗೆ ಕೇವಲ ಬಾಹ್ಯವಾದ ವೈಭವವನ್ನು ತೋರಿಸಲಿಕ್ಕಾಗಿ ಬೈಅತ್ ಮಾಡಿದವರನ್ನು ಒಟ್ಟುಗೂಡಿಸಲು ನಾನು ಬಯಸುವುದಿಲ್ಲ. ಬದಲಾಗಿ ನಾನು ಮಾಡುತ್ತಿರುವ ಯೋಜನೆಯ ಉದ್ದೇಶ ಅಲ್ಲಾಹನ ಸೃಷ್ಟಿಗಳ ಸುಧಾರಣೆಯಾಗಿದೆ.

ಆದ್ದರಿಂದ ಪ್ರತಿಯೊಬ್ಬ ಅಹ್ಮದಿ ಈ ಸಂಗತಿಯನ್ನು ತನ್ನ ಮುಂದಿರಿಸಬೇಕು. ಈ ಉದ್ದೇಶವನ್ನು ಗಳಿಸಲು ಪ್ರಯತ್ನಿಸುವುದಾದರೆ ಜಲ್ಸದಲ್ಲಿ ಬರುವ ಉದ್ದೇಶ ಪೂರ್ತಿಯಾಗುವುದು. ಜಲ್ಸದಲ್ಲಿ ಬಂದು ಕೂಡ ಅಲ್ಲಾಹನೊಂದಿಗೆ ಸಂಬಂಧ ಉಂಟಾಗುತ್ತಿಲ್ಲವೆಂದಾದರೆ, ಸ್ವಭಾವ ಉತ್ತಮಗೊಳ್ಳುತ್ತಿಲ್ಲವೆಂದಾದರೆ ಅಂತಹ ಭಾಗವಹಿಸುವವರ ಸಂಬಂಧಿಸಿ ಹಝ್‌ರತ್ ಮಸೀಹ್ ಮೌಊದ್[ಅ] ಬಹಳ ಅಸಮಾಧಾನವನ್ನು ವ್ಯಕ್ತಪಡಿಸಿರುವರು.

ಹಝ್‌ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನನ್ನ ಜಮಾಅತಿನಲ್ಲಿ ಬೈಅತ್ ಮಾಡಿ ಪ್ರವೇಶಿಸಿದ ನಿಷ್ಠಾವಂತರೊಡನೆ ನಾನು ವ್ಯಕ್ತಪಡಿಸುತ್ತೇನೆ. ಬೈಅತ್ ಮಾಡುವುದರ ಉದ್ದೇಶವೇನೆಂದರೆ, ಲೋಕದೊಂದಿಗೆ ಇರುವ ಪ್ರೀತಿ

ತಣ್ಣಗಾಗಬೇಕು ಮತ್ತು ನಮ್ಮ ಕಾರುಣ್ಯವಂತನಾದ ಅಲ್ಲಾಹನ ಮತ್ತು ಹಝ್ರತ್ ಪೈಗಂಬರ್[ಸ]ರ ಪ್ರೀತಿ ಹೃದಯದಲ್ಲಿ ಮೇಲುಗೈ ಸಾಧಿಸಬೇಕು ಮತ್ತು ಪರಲೋಕದ ಯಾತ್ರೆ ಅನಿಷ್ಟಕರವಾಗಿ ತೋರದ ರೀತಿಯ ಒಂದು ಅವಸ್ಥೆ ಉಂಟಾಗಬೇಕು.

ಸದಾ ನೆನಪಿಡಿರಿ, ಲೌಕಿಕವಾದ ಅನುಗ್ರಹಗಳು ಒಬ್ಬ ಅಹ್ಮದಿಯನ್ನು ಧರ್ಮದಿಂದ ದೂರಮಾಡುವಂತಹದ್ದು ಆಗಬಾರದು. ಈ ವ್ಯಾಪಾರ ಮತ್ತು ಲೌಕಿಕ ಅನುಗ್ರಹಗಳು ಒಬ್ಬ ಅಹ್ಮದಿಯನ್ನು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವವನನ್ನಾಗಿ ಮಾಡಬೇಕು. ಅಲ್ಲಾಹನ ಮತ್ತು ಅವನ ಪ್ರವಾದಿಯ ಪ್ರೀತಿ ಹೆಚ್ಚು ಹೆಚ್ಚಾಗಿ ಹೃದಯದಲ್ಲಿ ಉಂಟಾಗಬೇಕು. ಒಟ್ಟಿನಲ್ಲಿ ತಖ್ವಾದ ಮಟ್ಟವನ್ನು ವರ್ಧಿಸಲು ಪ್ರಯತ್ನಿಸಬೇಕು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಲ್ಲಾಹನು ಈ ಜಮಾಅತನ್ನು ಮಾಡಲು ಬಯಸಿದ್ದ ಉದ್ದೇಶವೇನೆಂದರೆ, ಲೋಕದಿಂದ ಇಲ್ಲವಾದ ನೈಜ ದೈವಿಕ ಪರಿಜ್ಞಾನ ಹಾಗೂ ಈ ಕಾಲದಲ್ಲಿ ಕಾಣದಂತಹ ಯಥಾರ್ಥ ದೇವಭಕ್ತಿ ಮತ್ತು ಪರಿಶುದ್ಧಿಯನ್ನು ಪುನಃ ಸ್ಥಾಪಿಸಬೇಕು ಎಂದಾಗಿದೆ. ನನ್ನ ಜಮಾಅತಿನಲ್ಲಿ ಸೇರಿದವರು ಎಂದು ಗಣಿಸುವ ಎಲ್ಲ ಜನರೇ, ತಖ್ವದ ಮಾರ್ಗದಲ್ಲಿ ಹೆಜ್ಜೆ ಹಾಕುವಾಗಲೇ ನನ್ನ ಜಮಾಅತಿನಲ್ಲಿ ಸೇರಿದವರು ಎಂದು ನೀವು ಆಕಾಶದಲ್ಲಿ ಗಣಿಸಲ್ಪಡುವಿರಿ. ಅಲ್ಲಾಹನ ವೈಭವವನ್ನು ತಮ್ಮ ಹೃದಯಗಳಲ್ಲಿ ಇರಿಸಿರಿ. ಏಕದೇವ ವಿಶ್ವಾಸವನ್ನು ಕೇವಲ ನಾಲಗೆಯಿಂದ ಮಾತ್ರವಲ್ಲ, ಕೃತ್ಯರೂಪದಲ್ಲಿ ತೋರಿಸಿರಿ. ಹಾಗಾದರೆ ಅಲ್ಲಾಹನು ಸಹ ಕೃತ್ಯರೂಪದಲ್ಲಿ ತನ್ನ ಕೃಪೆ ಮತ್ತು ಔದಾರ್ಯವನ್ನು ನಿಮ್ಮ ಮೇಲೆ ತೋರಿಸುವನು.

ಆದ್ದರಿಂದ ಹಝ್ರತ್ ಮಸೀಹ್ ಮೌಊದ್[ಅ]ರ ಈ ಉಪದೇಶಗಳನ್ನು ನೀವು ನಿಮ್ಮ ಮುಂದಿರಿಸಿರಿ. ಇದೇ ಜಲ್ಸದಲ್ಲಿ ಬರುವುದರ ಉದ್ದೇಶವಾಗಿದೆ. ನನ್ನ ಪ್ರತಿಯೊಂದು ಕೃತ್ಯ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿದೆ ಎಂಬ ಪ್ರಯತ್ನ ಆಗಬೇಕು. ನನ್ನ ಪ್ರತಿಯೊಂದು ಚಲನವಲನ ಅಲ್ಲಾಹನ ದೃಷ್ಟಿಯ ಮುಂದಿದೆ ಎಂಬುದನ್ನು ಸದಾ ನೆನಪಿಡಬೇಕು ಮತ್ತು ಅದನ್ನು ಮನಸ್ಸಿನಲ್ಲಿ ಇರಿಸಬೇಕು.

ಜಲ್ಸ ಸಾಲಾನ ಮತ್ತು ದೇವಸ್ಮರಣೆಗೆ ಸಂಬಂಧಿಸಿ ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ಈ ಜಲ್ಸ ಅಲ್ಲಾಹನ ಚಿಹ್ನೆಗಳಲ್ಲಿ ಒಂದಾಗಿದೆ. ಈ ಜಲ್ಸದಲ್ಲಿ ಭಾಗವಹಿಸುವುದರ ಒಂದು ಉದ್ದೇಶ ಆಧ್ಯಾತ್ಮಿಕ ಪ್ರಗತಿಯನ್ನು ಗಳಿಸುವುದಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್[ಅ] ಹೇಳಿರುವರು. ಅದರ ಒಂದು ಹಿರಿಯ ಮಾರ್ಗ ಆರಾಧನೆ ಮತ್ತು ದೇವಸ್ಮರಣೆಯಾಗಿದೆ. ನೀವು ದೇವಸ್ಮರಣೆ ಮಾಡಿದರೆ ಅಲ್ಲಾಹನು ಸಹ ನಿಮ್ಮ ಸ್ಮರಣೆ ಮಾಡುವನು ಎಂದು ದೇವಸ್ಮರಣೆಯ ಕುರಿತು ಅಲ್ಲಾಹನು ಹೇಳುತ್ತಾನೆ. ಆದ್ದರಿಂದ ಯಾವ ವ್ಯಕ್ತಿಯ ಸ್ಮರಣೆಯನ್ನು ಆತನ ಮಾಲಿಕ, ಆತನ ಸೃಷ್ಟಿಕರ್ತ ಮಾಡುತ್ತಾನೋ ಆತನು ಸೌಭಾಗ್ಯವಂತನು. ಆದ್ದರಿಂದ ಈ ಮುಖ್ಯವಾದ ಸಂಗತಿಯ ಕಡೆಗೆ ಈ ದಿನಗಳಲ್ಲಿ ಪ್ರತಿಯೊಬ್ಬನು ಗಮನ ನೀಡಬೇಕು. ಈ ಸಂಬಂಧವಾಗಿ ನಾನೊಂದು ಮನವಿಯನ್ನು ಮಾಡಲು ಬಯಸುತ್ತೇನೆ.

ಅದು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್[ರಹ್ಮತುಲ್ಲಾಹ್] ಕಂಡ ಒಂದು ಕನಸು ಆಗಿದೆ. ಅದರಲ್ಲಿ ಹಿರಿಯರೊಬ್ಬರು ಅವರೊಡನೆ ಹೀಗೆ ಹೇಳಿದ್ದರು: ಜಮಾಅತಿನ ಪ್ರತಿಯೊಬ್ಬ ಹಿರಿಯರು ಇನ್ನೂರು ಬಾರಿ **ಸುಬ್‌ಹಾನಲ್ಲಾಹಿ ವಬಿಹಮ್ದಿಹೀ ಸುಬ್‌ಹಾನಲ್ಲಾಹಿಲ್ ಅಝೀಮ್ – ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್** – ಎಂದು ಪಠಿಸಬೇಕು. ಮಧ್ಯ ವಯಸ್ಸಿನವರು ನೂರು ಬಾರಿ ಮತ್ತು ಮಕ್ಕಳು 33 ಬಾರಿ ಇದನ್ನು ಹೇಳಬೇಕು. ಚಿಕ್ಕ ಮಕ್ಕಳಿಗೆ ಅವರ ಹೆತ್ತವರು ಮೂರು ನಾಲ್ಕು ಬಾರಿ ಹೇಳಿಕೊಡಬೇಕು. ಅದೇ ರೀತಿಯಲ್ಲಿ ನೂರು ಬಾರಿ **ಇಸ್ತಿಗ್‌ಫಾರ್** ಮಾಡಬೇಕು. ನಾನು ಈ ಪ್ರಾರ್ಥನೆಯನ್ನು ಸಹ ಇದರಲ್ಲಿ ಸೇರಿಸುತಿದ್ದೇನೆ. **ರಬ್ಬಿ ಕುಲ್ಲು ಶೈಇನ್ ಖಾದಿಮುಕ ರಬ್ಬಿ ಫಹ್‌ಫಝ್‌ನೀ ವನ್‌ಸುರ್‌ನೀ ವರ್‌ಹಮ್‌ನೀ** ಎಂದು 100 ಬಾರಿ ಪಠಿಸಬೇಕು. ಈ ಪ್ರಾರ್ಥನೆಗಳನ್ನು ಮಾಡುತ್ತಾ ಇರುವವರು ಶೈತಾನನು ಎಂದಿಗೂ ಪ್ರವೇಶಿಸಲು ಸಾಧ್ಯವಾಗದಂತಹ ಒಂದು ಸುದೃಢ ಕೋಟೆಯಲ್ಲಿ ಪ್ರವೇಶಿಸುವರು ಎಂದು ಖಲೀಫತುಲ್ ಮಸೀಹ್ ಸಾಲಿಸ್[ರ]ರಿಗೆ ಕನಸಿನಲ್ಲಿ ತಿಳಿಸಲಾಯಿತು.

ಜಲ್ಸದ ಉದ್ದೇಶಗಳಲ್ಲಿ ಒಂದು ಉದ್ದೇಶ ಹಝ್ರತ್ ಮಸೀಹ್ ಮೌಊದ್[ಅ] ಹೇಳಿರುವುದೇನೆಂದರೆ, ಒಟ್ಟುಗೂಡುವವರು ಪರಸ್ಪರ ಪರಿಚಯಪಡಬೇಕು. ಎಂದರೆ ಪರಸ್ಪರ ಪ್ರೀತಿ ಮತ್ತು ಪರಿಚಯವನ್ನು ವರ್ಧಿಸಬೇಕು. ಆದ್ದರಿಂದ ಈ ದಿನಗಳಲ್ಲಿ ಪರಸ್ಪರ ಸಂಬಂಧಗಳನ್ನು ವರ್ಧಿಸಲು ಮತ್ತು ಶಾಂತಿಯನ್ನು ಹರಡಲು ಬಹಳ ಗಮನ ನೀಡಿರಿ. ಹಿಂದೆ ಸ್ಥಾಪಿಸಲಾದ ಸಂಬಂಧದಲ್ಲಿ ಏನಾದರೂ ಒಡಕು ಉಂಟಾಗಿದ್ದರೆ ಅದನ್ನು ದೂರ ಮಾಡಲು ಪೂರ್ಣವಾದ ಪ್ರಯತ್ನ ಮಾಡಿರಿ. ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ವ್ಯರ್ಥವಾದ ಸಂಗತಿಗಳಿಂದ ದೂರವಿರಿ. ಜಗಳಗಳಿಂದ ದೂರವಿರುವುದು ಮಾತ್ರವಲ್ಲ, ತಮ್ಮ ಹಳೆಯ ಜಗಳಗಳಿಗಾಗಿ ಪರಸ್ಪರ ಕ್ಷಮೆಯಾಚನೆ ನಡೆಸಿರಿ. ವೈಯಕ್ತಿಕ ಅಹಂಕಾರದ ಬಲೆಯಿಂದ ಹೊರಗೆ ಬನ್ನಿರಿ. ಮಾಮೂಲಿ ಸಂಗತಿಗಳಿಗಾಗಿ ಪರಸ್ಪರ ವೈಮನಸ್ಯ ಉಂಟಾಗುತ್ತದೆ ಎಂದು ದೂರುಗಳು ಬರುತ್ತವೆ. ಅನಂತರ ವ್ಯವಸ್ಥೆಯನ್ನು ನೆಲೆನಿಲ್ಲಿಸಲಿಕ್ಕಾಗಿ ಶಿಕ್ಷೆಗಳನ್ನು ನೀಡಬೇಕಾಗಿ ಬರುತ್ತದೆ. ಅದರಿಂದ ದುಃಖವಾಗುತ್ತದೆ. ಸಂತೋಷದಿಂದ ಶಿಕ್ಷೆಯನ್ನು ನೀಡಲಾಗುವುದಿಲ್ಲ. ಸದಾ ನೆನಪಿಡಿರಿ, ಜಮಾಅತಿನ ಪರಿಶುದ್ಧಿಯನ್ನು ನಾವು ಕಾಪಾಡಬೇಕಾಗಿದೆ. ಆದ್ದರಿಂದ ಜಮಾಅತಿನ ವ್ಯವಸ್ಥೆ ಅಥವಾ ಖಲೀಫತುಲ್ ಮಸೀಹ್ ಯಾರಿಗಾದರೂ ಶಿಕ್ಷೆ ನೀಡುವುದು ಜಮಾಅತಿನ ಪರಿಶುದ್ಧಿಯನ್ನು ನೆಲೆನಿಲ್ಲಿಸಲಿಕ್ಕಾಗಿದೆ. ಏಕೆಂದರೆ ಜಮಾಅತಿನ ಪರಿಶುದ್ಧಿಯು ಎಲ್ಲ ಸಂಬಂಧಗಳಿಗಿಂತ ಹೆಚ್ಚು ಮೇಲಾಗಿದೆ. ಈ ಸಂಬಂಧವಾಗಿ ಹುದ್ದೇದಾರರ ಮೇಲೂ ಹೆಚ್ಚಿನ ಹೊಣೆಗಾರಿಕೆಯಿದೆ. ಆದ್ದರಿಂದ ಅವರಲ್ಲಿ ಹೆಚ್ಚು ಸಹನೆ ಶಕ್ತಿ ಸಹ ಇರಬೇಕು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನೀವು ವಿನಯವಂತರಾಗಿರಿ. ಮನುಷ್ಯರಿಗೆ ಸ್ವರ್ಗ ಕೊಡಿಸುವುದಾಗಿ ನೀವು ಹೇಳುತ್ತಿರುವಾಗ ಪೂರ್ತಿ ಮನುಕುಲದೊಂದಿಗೆ ಸಹಾನುಭೂತಿ ತೋರಿಸಿರಿ. ಅಲ್ಲಾಹನು ಹೇಳಿರುವ ಕರ್ತವ್ಯಗಳನ್ನು ನಿಜವಾದ

ದೇವಭಯದಿಂದ ಈಡೇರಿಸಿರಿ. ಅವುಗಳ ಬಗ್ಗೆ ನಿಮ್ಮೊಡನೆ ಪ್ರಶ್ನಿಸಲಾಗುವುದು. ಅಲ್ಲಾಹನು ನಿಮ್ಮನ್ನು ತನ್ನೆಡೆಗೆ ಸೆಳೆಯಲು ಮತ್ತು ನಿಮ್ಮ ಹೃದಯಗಳನ್ನು ಸ್ವಚ್ಛಗೊಳಿಸಲು ನೀವು ನಮಾಝ್‌ಗಳಲ್ಲಿ ಬಹಳಷ್ಟು ದುಆ ಮಾಡಿರಿ. ಎಲ್ಲಿಯ ವರೆಗೆ ಮನುಷ್ಯನಿಗೆ ಅಲ್ಲಾಹನಿಂದ ಶಕ್ತಿ ಲಭಿಸುವುದಿಲ್ಲವೋ ಅಲ್ಲಿಯ ವರೆಗೆ ಯಾವುದೇ ಕೆಡುಕುಗಳಿಂದ ದೂರವಾಗಲು ಮನುಷ್ಯನು ಶಕ್ತನಾಗಲಾರನು. ಒಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಹೇಳಿರುವ ಮಟ್ಟ ಇದಾಗಿದೆ. ಅವುಗಳನ್ನು ನಮ್ಮೊಳಗೆ ಉಂಟುಮಾಡಲು ಪ್ರಯತ್ನಿಸಬೇಕು. ನಿಮ್ಮ ಸ್ವಭಾವ ಉತ್ತಮವಾಗಿರುವುದಾದರೆ ಇಲ್ಲಿ ಬರುವ ಅತಿಥಿಗಳು ಸಹ ಉತ್ತಮ ರೀತಿಯಲ್ಲಿ ಪ್ರಭಾವಿತಗೊಂಡು ಹೋಗುವರು. ಈ ಉತ್ತಮ ಸ್ವಭಾವವನ್ನು ತೋರಿಸುವುದು ಮೌನವಾದ ತಬ್ಲೀಗಿನ ಕೆಲಸವನ್ನು ಮಾಡುವುದು.

ಹಝ್ರತ್ ಮಸೀಹ್ ಮೌಊದ್(ಅ) ಎಂತಹ ನೋವು ಮತ್ತು ಕಳವಳದಿಂದ ತನ್ನ ಜಮಾಅತಿಗಾಗಿ ದುಆ ಮಾಡಿರುವರು ಎಂಬುದರ ಒಂದು ಮಾದರಿಯನ್ನು ನಾನು ನಿಮ್ಮ ಮುಂದೆ ಇರಿಸುತ್ತೇನೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನಾನು ದುಆ ಮಾಡುತ್ತೇನೆ. ನನ್ನಲ್ಲಿ ಜೀವ ಇರುವ ವರೆಗೂ ದುಆ ಮಾಡುತ್ತಿರುತ್ತೇನೆ. ಆ ದುಆ ಏನೆಂದರೆ, ನನ್ನ ಜಮಾಅತಿನವರ ಹೃದಯಗಳನ್ನು ಅಲ್ಲಾಹನು ಪರಿಶುದ್ಧಗೊಳಿಸಲಿ ಮತ್ತು ಅಲ್ಲಾಹನು ತನ್ನ ಕಾರುಣ್ಯದ ಹಸ್ತವನ್ನು ಚಾಚಿಕೊಂಡು ಅವರ ಹೃದಯಗಳನ್ನು ತನ್ನೆಡೆಗೆ ತಿರುಗಿಸಲಿ. ಎಲ್ಲ ದುಷ್ಟತನಗಳು ಮತ್ತು ಹಗೆಯನ್ನು ಅವರ ಹೃದಯಗಳಿಂದ ದೂರಮಾಡಲಿ, ಪರಸ್ಪರ ನಿಜವಾದ ಪ್ರೀತಿಯನ್ನು ದಯಪಾಲಿಸಲಿ.

ಈ ಜಲ್ಸವನ್ನು ಎಲ್ಲ ಅನುಗ್ರಹಗಳನ್ನು ಒಟ್ಟುಗೂಡಿಸುವಂತಹದನ್ನಾಗಿ ಅಲ್ಲಾಹನು ಮಾಡಲಿ. ಲೋಕದ ಸ್ಥಿತಿಗಳಿಗಾಗಿಯೂ ದುಆ ಮಾಡಿರಿ. ತಮ್ಮ ದೇಶಕ್ಕಾಗಿಯೂ ಬಹಳ ದುಆ ಮಾಡಿರಿ. ನಾವು ನಿಷ್ಠಾವಂತರಾಗಿ ಅಲ್ಲಾಹನ ಆದೇಶಗಳನ್ನು, ಇಸ್ಲಾಮಿನ ಬೋಧನೆಗಳನ್ನು, ಹಝ್ರತ್ ಪೈಗಂಬರ್(ಸ)ರ ನಿರ್ದೇಶನಗಳನ್ನು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಉಪದೇಶಗಳನ್ನು ಪಾಲಿಸುವವರಾದರೆ ಖಂಡಿತವಾಗಿಯೂ ಅಲ್ಲಾಹನು ನಮ್ಮ ದುಆಗಳನ್ನು ಆಲಿಸುವನು ಮತ್ತು ನಾವು ಲೋಕದ ಮಾರ್ಗದರ್ಶಿಗಳಾಗುವೆವು.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِىَ لَهٗ ، وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
At, ***'Masjid Mubarak',*** *Islamabad, Tilford,* U.K. On 23-08-2024
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email****:* *khutuba.kannada@gmail.com*
**You can find all the Sermons archived at**: www.alislam.org/friday-sermon